ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 24.01.2026

ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ. ಬಿ.ಕೆ ವಕೀಲರಿಂದ

1. ದಿನಾಂಕ 19.04.1934 ರ ಕ್ರಯಪತ್ರದಲ್ಲಿ ದಾವಾ ಸ್ವತ್ತಿನ ವಿಸ್ತೀರ್ಣ ನಮೂದಾಗಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಕೈತಪ್ಪಿನಿಂದ ಸ್ವತ್ತಿನ ವಿಸ್ತೀರ್ಣ ನಮೂದಾಗಿಲ್ಲ ಆದರೆ ಚೆಕ್ಕುಬಂಧಿಯನ್ನು ನೀಡಲಾಗಿದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ದಿನಾಂಕ 19.04.1934 ರ ಕ್ರಯಪತ್ರದ ರೀತ್ಯಾ ನನ್ನ ಅಜ್ಜಾನಾದ ತಿಮ್ಮೇಗೌಡ ಅಲಿಯಾಸ್ ದೊಡ್ಡತಿಮ್ಮೇಗೌಡರವರು ತಿಮ್ಮೇಗೌಡ ಮತ್ತು ಗಿರೀಗೌಡರವರಿಂದ ಖರೀದಿಸಿರುತ್ತಾರೆ. ನನ್ನ ತಂದೆಯು ನನ್ನ ಅಜ್ಜನಿಗೆ ದಾವಾ ಸ್ವತ್ತು ಕ್ರಯ ಆಗಿರುವ ಬಗ್ಗೆ ನನಗೆ ತಿಳಿಸಿದ್ದರು. ನನ್ನ ತಂದೆಗೂ ಸಹ ಕ್ರಯಪತ್ರದಲ್ಲಿ ವಿಸ್ತೀರ್ಣ ನಮೂದಾಗಿಲ್ಲ ಎಂಬ ಸಂಗತಿಯು ತಿಳಿದಿತ್ತು. ನನ್ನ ತಂದೆಯು ತಮ್ಮ ಜೀವಿತಾ ಕಾಲದಲ್ಲಿ ಸದರಿ ಕ್ರಯಪತ್ರವನ್ನು ತಿದ್ದುಪಡಿ ಮಾಡಿಸಿಕೊಳ್ಳಲು ಪ್ರಯತ್ನಿಸಿರುವುದಿಲ್ಲ. ನನ್ನ ದಾವಾ ಸ್ವತ್ತಿನ ಚೆಕ್ಕುಬಂಧಿಯ ನಂತರ ಉತ್ತರದ ಕಡೆಗೆ 3 ನೇ ಪ್ರತಿವಾದಿಯ ಸ್ವತ್ತು ಇದೆ. ಸಾಕ್ಷಿ ಮುಂದುವರಿದು ದಾವಾ ಸ್ವತ್ತಿನ ಉತ್ತರ ಧಿಕ್ಕಿಗೆ ಕಡೆಗೆ ಕೆರೆಗೆ ಅಲ್ಲ, ಪುಟ್ಟೇಗೌಡನ ಹೊಲ ಮತ್ತು ಈಶ್ವರನ ದೇಸ್ಥಾನದ ನಂತರ 3 ನೇ ಪ್ರತಿವಾದಿಯ ಮನೆ ಇದೆ ಎಂದು ನುಡಿಯುತ್ತಾರೆ. ನಮ್ಮ ದಾವಾ ಸ್ವತ್ತಿನಿಂದ 3 ನೇ ಪ್ರತಿವಾದಿಯ ಮನೆಗೆ 50 ಮೀ. ಅಂತರದಲ್ಲಿದೆ. ಅವರ ಮನೆ ಅಡಿಗಳ ಲೆಕ್ಕದಲ್ಲಿ ಎಷ್ಟು ಅಡಿ ಅಂತರದಲ್ಲಿ ಇದೆ ಎಂದು ನನಗೆ ಹೇಳಲಾಗುವುದಿಲ್ಲ. ನನ್ನ ಸ್ವತ್ತಿನ ಉತ್ತರಕ್ಕೆ ಕೆರೆಗೆ ಅಲ್ಲ ಎಂದು ತಿಳಿಸಿದ್ದು ಅದು ಕೆರೆಗೆ ಹೋಗುವ

ರಸ್ತೆಯಾಗಿರುತ್ತದೆ ಅದರ ವಿಸ್ತೀರ್ಣ ಸುಮಾರು 08 ಅಡಿ ಅಗಲ ಇದೆ. ಪುಟ್ಟೇಗೌಡರ ಹೆಸರಿನಲ್ಲಿ 20 ಗುಂಟೆ ಜಮೀನಿದ್ದು ಅಲ್ಲಿ ಈಗ ಪೂರ್ತಾ ಮನೆ ಕಟ್ಟಿಕೊಂಡಿರುತ್ತಾರೆ. ಈಗ ಹಾಲಿ ಅಣ್ಣೇಗೌಡರ ವಾಸದ ಮನೆ ಉತ್ತರ ಧಿಕ್ಕಿನಲ್ಲಿ ಪುಟ್ಟೇಗೌಡರ ಜಮೀನಿನಲ್ಲಿ ಇದೆ. ಈಶ್ವರ ದೇವಸ್ಥಾನವು ಅಂದಾಜು 15 X 12 ಅಡಿ ಜಾಗದಲ್ಲಿ ಇದೆ. ನನ್ನ ದಾವಾ ಸ್ವತ್ತಿನ ಪಕ್ಕದಲ್ಲಿ 3ನೇ ಪ್ರತಿವಾದಿಯ ಮನೆ ಇಲ್ಲ ಎಂದರೆ ಸರಿ.

2. 1ನೇ ಪ್ರತಿವಾದಿಯ ಆಸ್ತಿಯು ದಕ್ಷಿಣ ಧಿಕ್ಕಿನ ಚೆಕ್ಕುಬಂಧಿ ರಂಗದ ಬೀದಿ ಬಿಟ್ಟು ನಂತರ ಇದೆ. ನಮ್ಮ ಮನೆಯ ಮುಂದೆ ರಂಗದ ಬೀದಿ ಇದೆ ಎಂದರೆ ಸರಿ. ರಂಗದ ಬೀದಿ ಎಂದರೆ ಗ್ರಾಮದಲ್ಲಿ ಸಾರ್ವಜನಿಕರು ಹಬ್ಬವನ್ನು ಆಚರಣೆ ಮಾಡಲು ಬಿಟ್ಟುಕೊಂಡಿರುವ ಸ್ಥಳ ಎಂದರೆ ಸರಿ. ರಂಗದ ಬೀದಿಯ ಅಳತೆಯು ಸುಮಾರು 50 ರಿಂದ 60 ಅಡಿ ಇದೆ. ತದ ನಂತರ 1ನೇ ಪ್ರತಿವಾದಿಯ ಮನೆ ಇದೆ ಎಂದರೆ ಸರಿ. ಸದರಿ ಮನೆಯನ್ನು 1ನೇ ಪ್ರತಿವಾದಿ ವಾಸ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಅಲ್ಲಿ ದನ ಕರುಗಳನ್ನು ಕಟ್ಟಿಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಗೆ ಮೂರು ಜನ ಸಹೋದರರು. 1ನೇ ಪ್ರತಿವಾದಿಯ ಸಹೋದರರು ವಿಭಾಗ ಮಾಡಿಕೊಂಡು ತಮ್ಮ ತಮ್ಮ ವಿಭಾಗದಲ್ಲಿ ವಾಸ ಇದ್ದಾರೆ ಎಂದರೆ ಸರಿ. 1ನೇ ಪ್ರತಿವಾದಿಯು ವಾಸ ಆಗಿರುವ ಮನೆಯು ದಾವಾ ಸ್ವತ್ತಿನಿಂದ ಸುಮಾರು 1 ಕಿ.ಮೀ ದೂರದಲ್ಲಿ ಇದೆ ಎಂದರೆ ಸಾಕ್ಷಿಯು ಸುಮಾರು 1/2 ಕಿ.ಮೀ ದೂರದಲ್ಲಿ ಇದೆ ಎಂದು ನುಡಿಯುತ್ತಾರೆ.

3. 2ನೇ ಪ್ರತಿವಾದಿಯ ಆಸ್ತಿಯು ದಾವಾ ಧಿಕ್ಕಿನ ಪಶ್ಚಿಮ ಧಿಕ್ಕಿನ ಮೂಲೆಯಲ್ಲಿ ಇದೆ. ಅವರ ಮನೆಯು ದಾವಾ ಸ್ವತ್ತಿನಿಂದ ಸುಮಾರು 2 ಕಿ.ಮೀ

ದೂರದಲ್ಲಿ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸುಮಾರು 1/2 ಕಿ.ಮೀ ದೂರದಲ್ಲಿ ಇದೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯು ಬಳ್ಳೇಕೆರೆಗೆ ಹೋಗುವ ಮುಖ್ಯ ರಸ್ತೆಯಲ್ಲಿ ಮನೆ ಕಟ್ಟಿಕೊಂಡಿದ್ದು, ಅವರ ಅಕ್ಕಪಕ್ಕ ಯಾವುದೇ ಮನೆಗಳು ಇಲ್ಲ ಎಂದರೆ ಸರಿಯಲ್ಲ.

4. ಪ್ರತಿವಾದಿಗಳು ನಮ್ಮ ಮನೆಯ ಮುಂಭಾಗ ತಿರುಗಾಡುವುದಿಲ್ಲ ಎಂದರೆ ಸರಿ. ಪ್ರತಿವಾದಿಗಳು ನನ್ನ ಸಂಬಂಧಿಕರಲ್ಲ ಎಂದರೆ ಸರಿ. ದಾವಾ ಷೆಡ್ಯೂಲ್ ಆಸ್ತಿಯ ಅಕ್ಕಪಕ್ಕ ಬೇರೆ ಯಾವುದೇ ಜಮೀನು ಅಥವಾ ಮನೆಗಳು ಇಲ್ಲ. ನಾನು ನನ್ನ ದಾವಾ ಸ್ವತ್ತಿಗೆ ನೀಡಿರುವ ಚೆಕ್ಕುಬಂಧಿಯು 1934 ರ ಕ್ರಯಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂಧಿ ಎಂದರೆ ಸರಿ. ದಾವಾ ಸ್ವತ್ತಿನ ಪಶ್ಚಿಮ ಮತ್ತು ಉತ್ತರ ಧಿಕ್ಕಿನಲ್ಲಿ ಮನೆಗಳು ಇರುವ ಸಂಗತಿಗಳು ನಿಮಗೆ ಗೊತ್ತಿಲ್ಲವೇ ಎಂದರೆ ಸಾಕ್ಷಿಯು ಅಲ್ಲಿ ಯಾವುದೇ ಮನೆಗಳು ಇಲ್ಲ ಎಂದು ನುಡಿಯುತ್ತಾರೆ.

ನ್ಯಾಯಾಲಯದ ಪ್ರಶ್ನೆಃ

1. ಪಶ್ಚಿಮ ಧಿಕ್ಕಿಗೆ ಪಿತ್ರಾರ್ಜಿತವಾಗಿ ಬಂದ ನಮ್ಮ ಮನೆ ಎಂದು ಚೆಕ್ಕುಬಂಧಿಯಲ್ಲಿ ನಮೂದಿಸಿದ್ದು ಅದು ನಿಮಗೆ ಹೇಗೆ ಬಂದಿತು?

ಉತ್ತರಃ ನನ್ನ ಅಜ್ಜನ ಕಾಲದಿಂದಲೂ ನಾನು ಅದೇ ಮನೆಯಲ್ಲಿ ವಾಸ ಇದ್ದೇನೆ . ಅದು ಪಿತ್ರಾರ್ಜಿತವಾಗಿ ಬಂದ ಆಸ್ತಿಯಾಗಿರುತ್ತದೆ.

5. ನಾನು ಗ್ರಾಮ ಠಾಣಾ ಜಾಗದಲ್ಲಿ ವಾಸವಾಗಿದ್ದು, ಪಿತ್ರಾರ್ಜಿತವಾಗಿ ಬಂದ ಯಾವುದೇ ಆಸ್ತಿ ನನಗೆ ಇಲ್ಲ ಎಂದರೆ ಸರಿಯಲ್ಲ.

6. ನಾನು ಹೇಳುವ ದಾವಾ ಷೆಡ್ಯೂಲ್ ಆಸ್ತಿಯಲ್ಲಿ ಮಹೇಶ ಬಿನ್ ಲೇಟ್ ಜವರೇಗೌಡ, ರವಿ ಬಿನ್ ಲೇಟ್ ವೆಂಕಟೇಗೌಡ, ಜಯಲಕ್ಷ್ಮಮ್ಮ ಕೋಂ ಲೇಟ್

ವೆಂಕಟೇಶ್ ರವರ ಮನೆಗಳು ಮತ್ತು ಜಯರಾಮು ಬಿನ್ ಗಿರೀಗೌಡ, ವೆಂಕಟೇಶ ಬಿನ್ ರಾಮೇಗೌಡ, ಕೃಷ್ಣೇಗೌಡ ಬಿನ್ ಸಣ್ಣ ಕರೀಗೌಡರ ಖಾಲಿ ನಿವೇಶನಗಳು ಇವೆ ಎಂದರೆ ಸುಳ್ಳು.

7. ನನ್ನ ತಂದೆಯ ಹೆಸರು ಹೊನ್ನ ಗಿರೀಗೌಡ ಮತ್ತು ತಾಯಿಯ ಹೆಸರು ಲಕ್ಷ್ಮಮ್ಮ ಆಗಿರುತ್ತದೆ. ನನ್ನ ಅಜ್ಜಿಯ ಹೆಸರು ತಿಮ್ಮಮ್ಮ ಆಗಿರುತ್ತದೆ. ನನ್ನ ಅಜ್ಜಿಯು ನಮ್ಮ ಮನೆಯ ಮುಂಭಾಗ ಇರುವ ರಂಗಬೀದಿಯಲ್ಲಿ ದನಕರುಗಳನ್ನು ಕಟ್ಟಿ ಹಾಕುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ವಿಚಾರವಾಗಿ ಈ ಹಿಂದಿನಿಂದಲೂ ನನಗೂ ಮತ್ತು ಗ್ರಾಮಸ್ಥರಿಗೂ ವಿವಾದ ಇದೆ ಎಂದರೆ ಸರಿ. 1999 ರಿಂದ ಈಚೆಗೆ ನನಗೂ ಮತ್ತು ಗ್ರಾಮಸ್ಥರ ನಡುವೆ ವಿವಾದ ಇದೆ. ಕಳೆದ 25 ವರ್ಷಗಳಿಂದಲೂ ವಿವಾದ ಇದೆ ಎಂದರೆ ಸರಿ. ನನ್ನ ಅಜ್ಜಿ, ನನ್ನ ತಂದೆ ಬದುಕಿದ್ದ ಸಮಯದಲ್ಲಿ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ವಿವಾದಗಳು ಇರಲಿಲ್ಲ.

8. ಈ ಹಿಂದೆ ಹೆಮ್ಮನಹಳ್ಳಿ ಗ್ರೂಪ್ ಪಂಚಾಯ್ತಿ ಎಂದು ಇತ್ತು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಗಿರೀಗೌಡ ಎಂಬುವವರು ಅಧ್ಯಕ್ಷರಾಗಿದ್ದ ಬಗ್ಗೆ ನನಗೆ ನೆನಪಿಲ್ಲ. ಈ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ದಿನಾಂಕ 11.11.1979 ರಲ್ಲಿ ಪಂಚಾಯ್ತಿ ಕಾರ್ಯದರ್ಶಿ ಮತ್ತು ಅಧ್ಯಕ್ಷರು ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲನೆ ಮಾಡಿದ ನಂತರ ಅದನ್ನು ಸಾರ್ವಜನಿಕ ಕಾರ್ಯಕ್ರಮಗಳಿಗೆ ಮೀಸಲಿಟ್ಟಿದ್ದರು ಮತ್ತು ನಮ್ಮ ಅಜ್ಜಿ ತಿಮ್ಮಮ್ಮನಿಗೆ ಯಾವುದೇ ಮಾಲೀಕತ್ವ ಇಲ್ಲ ಎಂದು ಠರಾವು ಮಾಡಲಾಗಿತ್ತು ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ವಿಸ್ತೀರ್ಣದಲ್ಲಿ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು

ರಂಗಸ್ಥಳ ಆಗಿದ್ದು ಸುಮಾರು 50 ವರ್ಷಗಳಿಂದಲೂ ನಮ್ಮ ಕುಟುಂಬಕ್ಕು ಮತ್ತು ಗ್ರಾಮಸ್ಥರ ನಡುವೆ ವಿವಾದ ಇದೆ ಎಂದರೆ ಸರಿಯಲ್ಲ.

9. ನಾನು ವಾಸವಾಗಿರುವ ಮನೆಗೆ ರಸ್ತೆಯ ಕಡೆಗೆ ಶೀಟನ್ನು ಅಳವಡಿಸಿದ್ದು ಅದನುನ ಗ್ರಾಮಸ್ಥರು ಸಾರ್ವಜನಿಕರಿಗೆ ತೊಂದರೆಯಾಗುತ್ತದೆ ಎಂದು ತೆರವುಗೊಳಿಸಿದ್ದರೂ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ತೆಂಗಿನ ಮರಗಳು, ಅಡಿಕೆ ಗಿಡಗಳು ಇದೆ ಎಂದು ತೋರಿಸಲು ಭಾವಚಿತ್ರಗಳನ್ನು ಹಾಜರುಪಡಿಸಿರುತ್ತೀರ ಎಂದರೆ ಇಲ್ಲ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಯಾವುದೇ ದಾಖಲೆ ಹಾಜರುಪಡಿಸದೆ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅವುಗಳನ್ನು ನಾಶಪಡಿಸಿರುವ ಬಗ್ಗೆಯೂ ಸಹ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ಕೇವಲ 30 X 50 ಅಡಿ ವಿಸ್ತೀರ್ಣದಲ್ಲಿ ಮಾತ್ರ ಸ್ವಾಧೀನ ಹೊಂದಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಗ್ರಾಮದ ಮಧ್ಯ ಭಾಗದಲ್ಲಿ ಇದ್ದು ಅಲ್ಲಿ ಯಾವುದೇ ತೋಟ ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಬೇರೆ ಗ್ರಾಮಸ್ಥರ ಮನೆಗಳು ಇದ್ದರೂ ಸಹ ನಾನು ಯಾವುದೇ ಮನೆಗಳು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ಪಿ ಡಬ್ಲ್ಯೂ 2 ರವರು ನನ್ನ ಸ್ವಂತ ಸೋದರ ಮಾವನ ಮಗನಾಗಿದ್ದು ಆತನು ಬಣ್ಣೇನಹಳ್ಳಿ ಗ್ರಾಮದವರಾಗಿರುತ್ತಾರೆ. ಬಣ್ಣೇನಹಳ್ಳಿಯೂ ನಮ್ಮ ಗ್ರಾಮದಿಂದ ಸುಮಾರು 06 ಕಿ.ಮೀ ಅಂತರದಲ್ಲಿದೆ. ಪಿ ಡಬ್ಲ್ಯೂ 3 ರವರು ಸ್ವಂತ ನನ್ನ ತಾಯಿಯ ಚಿಕ್ಕಮ್ಮನ ಮಗ, ಅವರು ಬಂಡಿಹೊಳೆ ಗ್ರಾಮದವರು.

ಪಿ ಡಬ್ಲ್ಯೂ 2 ಮತ್ತು 3 ರವರು ನನ್ನ ಸ್ವಂತ ಸಂಬಂಧಿಕರಾಗಿದ್ದು, ಅವರನ್ನು ಕರೆದುಕೊಂಡು ಬಂದು ಸುಳ್ಳು ಸಾಕ್ಷ್ಯ ನುಡಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನಗೆ ಯಾವುದೇ ರೀತಿಯ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

11. 3 ನೇ ಪ್ರತಿವಾದಿಯ ವಿರುದ್ಧ ನಾನು ಪೋಲೀಸ್ ದೂರು ನೀಡಿದ್ದು ಪೋಲೀಸರು ಆತನ ವಿರುದ್ಧ ಸಾಕ್ಷ್ಯ ಆಧಾರ ಇಲ್ಲ ಎಂದು ದೋಷಾರೋಪಣಾ ಪತ್ರದಲ್ಲಿ ಕೈ ಬಿಟ್ಟಿರುತ್ತಾರೆ ಎಂದರೆ ಸಾಕ್ಷಿಯು ಆತನೇ ಮೂಲ ಕಾರಣ ಎಂದು ನುಡಿಯುತ್ತಾರೆ. ನಾನು ದೂರು ನೀಡುವ ಸಮಯದಲ್ಲಿ 3 ನೇ ಪ್ರತಿವಾದಿಯು ನಮ್ಮ ಗ್ರಾಮದ ಪಂಚಾಯ್ತಿ ಸದಸ್ಯ ಎಂದರೆ ಸರಿ. ನಾನು ಅವರನ್ನು ಭೇಟಿ ಮಾಡಿ ದಾವಾ ಸ್ವತ್ತನ್ನು ಅಕ್ರಮವಾಗಿ ಖಾತೆ ಮಾಡಿಕೊಡುವಂತೆ ಕೇಳಿದ್ದು ಆಗ ಅವರು ಅದು ಗ್ರಾಮದ ರಂಗಸ್ಥಳ ಮಾಡಲು ಆಗುವುದಿಲ್ಲ ಎಂದು ತಿಳಿಸಿದ ಕಾರಣ ಸುಳ್ಳು ದೂರು ದಾಖಲಿಸಿದ್ದೆ ಎಂದರೆ ಸರಿಯಲ್ಲ. ಪ್ರಸ್ತುತ ದಾವಾ ಸಂಗತಿಗಳಿಗೂ ಮತ್ತು ಪ್ರತಿವಾದಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಅಕ್ರಮವಾಗಿ ಗ್ರಾಮ ಠಾಣಾ ಪ್ರದೇಶವನ್ನು ವಶಪಡಿಸಿಕೊಳ್ಳುವ ದುರುದ್ದೇಶದಿಂದ ಸುಳ್ಳು ದಾವಾ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ವಿಸ್ತೀರ್ಣಕ್ಕೆ ಸಂಬಂಧಪಟ್ಟಂತೆ ಪಂಚಾಯ್ತಿ ಅಧಿಕಾರಿಗಳ ಜೊತೆ ಶ್ಯಾಮಿಲಾಗಿ ಸುಳ್ಳು ವಿಸ್ತೀರ್ಣ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈಗಲೂ ಸಹ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನನ್ನ ಹೆಸರಿನಲ್ಲಿ ಇ-ಖಾತಾ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ದಾವಾ ಚಾಲ್ತಿಯಲ್ಲಿ ಇರುವುದರಿಂದ ಖಾತೆಯಾಗಿಲ್ಲ ಎಂದು ನುಡಿಯುತ್ತಾರೆ.

12.ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಆಸ್ತಿಯನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುತ್ತಾರೆ ಎಂದು ನನ್ನ ವಿರುದ್ಧ ಗ್ರಾಮಸ್ಥರು ಪಂಚಾಯ್ತಿಗೆ ದೂರು ನೀಡಿರುತ್ತಾರೆ ಎಂದರೆ ಸುಳ್ಳು. ಕ್ರಿಮಿನಲ್ ಪ್ರಕರಣದಲ್ಲಿ ನಮ್ಮ ಗ್ರಾಮದ ಯಾವುದೇ ಗ್ರಾಮಸ್ಥರು ಸಾಕ್ಷಿದಾರರು ಅಲ್ಲ ಎಂದರೆ ಸರಿ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.